**ಸಿ. ಸಿ. ನಂ.36/2017 ಪಿ.ಡಬ್ಲ್ಯೂ- 2 ಹೆಸರು -ಮಹೇಂದ್ರ**

**ಸಾಕ್ಷಿಯನ್ನು ದಿನಾಂಕಃ 03.01.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಸಿ ಎಲ್ ಬಿ ವಕೀಲರಿಂದಃ-**

ಗಲಾಟೆಯು ದಿನಾಂಕ 22.06.2016 ರಂದು ಸಂಜೆ 05.00 ಗಂಟೆಗೆ ನಡೆದಿರುತ್ತದೆ. ಗಲಾಟೆಯ ಕಾಲಕ್ಕೆ ಸುಮಾರು 10 ಕ್ಕಿಂತ ಹೆಚ್ಚು ಜನ ಇದ್ದರು. ಮಹದೇವ ಪ್ರಸಾದ್, ಶಿವಣ್ಣ, ಮಲ್ಲೇಶ್, ರವಿ, ಮಾದಪ್ಪ, ಗುರುರಾಜು ಇದ್ದರು. ಗಲಾಟೆಯು ಸುಮಾರು 05.00 ಗಂಟೆಗೆ ಪ್ರಾರಂಭವಾಗಿ ಒಂದು ಗಂಟೆ ಕಾಲ ನಡೆಯಿತು. ಚಾಸಾ 1 ಮತ್ತು ನನಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಸ್ವಲ್ಪ ಪ್ರಮಾಣದ ರಕ್ತ ಬಂದಿತ್ತು. ಗಲಾಟೆಯ ಕಾಲಕ್ಕೆ ನಮ್ಮ ಸಂಬಂಧಿಕರಾದ ರವಿರವರು ಇದ್ದರು. ಗಲಾಟೆಯ ದಿನ ಕತ್ತಲಾಗಿದ್ದರಿಂದ ಮರುದಿನ ಬೆಳಗ್ಗೆ ಆಸ್ಪತ್ರೆಗೆ ಹೋಗಿದ್ದೆವು. ಗಲಾಟೆಯ ದಿನದಂದೇ ಹುಲ್ಲಹಳ್ಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ನೋವಿನ ಇಂಜೆಕ್ಷನನ್ನು ತೆಗೆದುಕೊಂಡು ಆ ದಿನ ರಾತ್ರಿ ಕಾರ್ಯ ಗ್ರಾಮದಲ್ಲಿದ್ದೆವು. ಹುಲ್ಲಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ರಾತ್ರಿ 06.30 ರಿಂದ 07.00 ರ ಸಮಯಕ್ಕೆ ಬಂದಿದ್ದೆವು. ಹುಲ್ಲಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಆರೋಪಿತರು ಹೊಡೆದಿದ್ದರು ಎಂದು ಹೇಳಿರಲಿಲ್ಲ, ಬದಲಾಗಿ ಬಿದ್ದಿದ್ದೆವು ಎಂದು ಹೇಳಿದ್ದೆವು. ಸರ್ಕಾರಿ ಆಸ್ಪತ್ರೆಗೆ ನಾನೊಬ್ಬನೇ ಹೋಗಿದ್ದೆನು, ಚಾಸಾ 1 ರವರು ಬಂದಿರಲಿಲ್ಲ. ಕಾರ್ಯ ಗ್ರಾಮದಲ್ಲಿ ನಮ್ಮ ಸಂಬಂಧಿಕರ ಮನೆಯಲ್ಲಿದ್ದೆನು. ನಮ್ಮ ಸ್ವಂತ ಊರು ಗುಂಡ್ಲುಪೇಟೆ ತಾಲ್ಲೂಕಿನ ಬೆಳವಡಿ. ಹುಲ್ಲಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ನನ್ನೊಂದಿಗೆ ಕಾರ್ಯ ಗ್ರಾಮದ ಪ್ರಕಾಶ್ ರವರು ಬಂದಿದ್ದರು. ನಾನು ಕಾರ್ಯ ಗ್ರಾಮಕ್ಕೆ ಹೋಗಿ ಅಲ್ಲಿಂದ ಪ್ರಕಾಶ್ ರವರ ಜೊತೆ ಹುಲ್ಲಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಹೋದೆನು.

2. ಬೆಳವಡಿ ಗ್ರಾಮದಿಂದ ಚಿಲಕ ಹಳ್ಳಿಗೆ 50 ಕಿ.ಮೀ ಇದೆ. ಚಾಸಾ 1 ನನ್ನ ತಂದೆ, ಚಾಸಾ 7 ನನ್ನ ತಾಯಿಯ ಅಣ್ಣ ಆಗಿದ್ದು, ನನಗೆ ಮಾವ ಆಗಬೇಕು. ಚಾಸಾ 3 ನನ್ನ ಮಾವನ ಮಗ, ಚಾಸಾ 4 ನನ್ನ ದೂರದ ಸಂಬಂಧಿಕರು. ಚಿಲಕಹಳ್ಳಿಯಲ್ಲಿ ನಮಗೆ ಜಮೀನು ಇದ್ದು, ಹಾಗಾಗಿ ಚಿಲಕ ಹಳ್ಳಿಗೆ ಹೋಗಿದ್ದೆವು. ನಮಗೆ ಚಿಲಕ ಹಳ್ಳಿಯಲ್ಲಿ ಜಮೀನು ಇರುವ ಬಗ್ಗೆ ಪೊಲೀಸರಿಗೆ ದಾಖಲಾತಿ ಕೊಟ್ಟಿರುವ ಬಗ್ಗೆ ನನಗೆ ನೆನಪಿಲ್ಲ. ಪೊಲೀಸರಿಗೆ ಜಮೀನು ಇರುವ ಬಗ್ಗೆ ದಾಖಲಾತಿ ಕೊಟ್ಟಿರುವ ಕುರಿತು ನನಗೆ ಗೊತ್ತಿಲ್ಲ.

3. ಆರೋಪಿತನ ಬಳಿ ನನ್ನನ್ನು ಕ್ರಿಕೆಟ್ ಆಟಕ್ಕೆ ಸೇರಿಸಿಕೊಳ್ಳುವಂತೆ ಕೇಳಿದಾಗ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ನನಗೆ ಕ್ರಿಕೆಟ್ ಬ್ಯಾಟಿನಿಂದ ನನ್ನ ಬಲ ತೋಳಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಮುದ್ದೆ ಮಾಲು 1 ರ ಬ್ಯಾಟಿನಿಂದ ನನ್ನ ಬಲ ಪಾದಕ್ಕೆ ಹೊಡೆದಿಲ್ಲ

ಎಂದರೆ ಸರಿಯಲ್ಲ. ಚಾಸಾ 3 ರವರಿಗೆ 1 ನೇ ಆರೋಪಿ ಮುದ್ದೆ ಮಾಲು 1 ರ ಬ್ಯಾಟಿನಿಂದ ಎಡಭುಜಕ್ಕೆ ಹೊಡೆದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ 3 ರವರಿಗೆ ಮುದ್ದೆ ಮಾಲು 1 ರ ಬ್ಯಾಟಿನಿಂದ ಕಾಲಿಗೆ ಮತ್ತು ತೋಳಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. 4 ಮತ್ತು 5 ನೇ ಆರೋಪಿತರು ಗಲಾಟೆಯನ್ನು ಬಿಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ 6 ರವರು ನನ್ನನ್ನು ಮತ್ತು ಚಾಸಾ 3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿತರ ನಡುವೆ ಹಳೆ ದ್ವೇಷ ಇತ್ತು ಎಂಬುದರ ಕುರಿತು ನನಗೆ ಗೊತ್ತಿಲ್ಲ. ಆರೋಪಿತರನ್ನೇ ಕೇಳಬೇಕು ಎಂದು ಹೇಳುತ್ತಾರೆ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಮುದ್ದೆ ಮಾಲು 1 ರ ಬ್ಯಾಟಿನಿಂದ ಚಾಸಾ 3 ರವರ ಎಡ ಬೆನ್ನಿನ ಎಡ ಭಾಗಕ್ಕೆ ಹೊಡೆದಿಲ್ಲ ಎಂದರೆ ಸರಿಯಲ್ಲ.

4. ಪಂಚಾಯಿತಿಯನ್ನು ನನ್ನ ಮಾವನವರು ಸೇರಿಸಿದ್ದರು, ಆ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮಾವನವರಾದ ಚಾಸಾ 7 ರವರೇ ಗೌಡಿಕೆಯನ್ನು ಮಾಡುತ್ತಿದ್ದಾರೆ. ಚಾಸಾ 7 ಮತ್ತು ಆರೋಪಿತರ ನಡುವೆ ಭಿನ್ನಾಭಿಪ್ರಾಯವಿದ್ದು, ಆ ಕಾರಣದಿಂದ ಚಾಸಾ 7 ರವರು ನನ್ನ ಮೂಲಕ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಎಸಗದಿದ್ದಾಗ್ಯೂ ಚಾಸಾ 7 ರವರ ಮಾತನ್ನು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**